ದಿನಾಂಕಃ 10.01.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.
ಪಾಟೀ ಸವಾಲುಃ ಅರೋಪಿ ಪರ ವಕೀಲರಿಂದಃ

ಅರೋಪಿಯವರು ಚಾಕಪೋಹಳ್ಳಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ವಾಸಿಯಾಗಿದ್ದಾರೆಂದರೆ ಸರಿಯಲ್ಲ. ಅರೋಪಿಯವರು ಈಗಲೂ ಸದರಿ ಮೇಲೆ ಹೇಳಿದ ಗ್ರಾಮದಲ್ಲಿ ವಾಸಿಸುತ್ತಿದ್ದಾರೆಂದರೆ ಸರಿಯಲ್ಲ. ಅರೋಪಿಯವರು ಈಗ ಚಿಂತಾಮಣಿಯ ಗುಂಡಪ್ಪ ಲೇಔಟ್‌ನಲ್ಲಿ ವಾಸಿಸುತ್ತಿದ್ದಾರೆ. ಅರೋಪಿಯವರ ಅದು ಸ್ವಂತ ಮನೆಯಾಗಿದೆಯೋ ಬಾಡಿಗೆ ಮನೆಯಾಗಿದೆಯೋ ನನಗೆ ಗೊತ್ತಿಲ್ಲ. ಅರೋಪಿಯವರು ಚಿಂತಾಮಣಿಯ ಗುಂಡಪ್ಪ ಲೇಔಟ್‌ನಲ್ಲಿ ವಾಸಿಸುತ್ತಿದ್ದಾರೆಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ. ಅರೋಪಿಯವರು ನನ್ನ ಸ್ನೇಹಿತರಾಗಿರುತ್ತಾರೆ. ಅವರು ಕಳೆದ 6-7 ವರ್ಷಗಳಿಂದ ನನಗೆ ಸ್ನೇಹಿತರಾಗಿರುತ್ತಾರೆ. 2-03-2017ರಂದು ಅರೋಪಿಯವರು ಹಣ ಬೇಕೆಂದು ನನ್ನ ಬಳಿ ಕೇಳಿದ್ದರು. ದಿಃ 15.03.2017ರಂದು ನಾನು ಅವರಿಗೆ ರೂ 2 ಲಕ್ಷ ಹಣವನ್ನು ಅವರ ಚಿಂತಾಮಣಿಯ ಮನೆಯಲ್ಲಿ ಹೋಗಿ ಕೊಟ್ಟಿರುತ್ತೇನೆ. ನಾನು ಹಣ ಕೊಟ್ಟ ಸಮಯದಲ್ಲಿ ಅರೋಪಿಯವರ ಮನೆಯಲ್ಲಿ ಅವರು ಒಬ್ಬರೇ ಇದ್ದರು.

ನಾನು ಬಿಇ ಮೆಕ್ಯಾನಿಕ್ ಪದವಿದರನಾಗಿರುತ್ತೇನೆ. 2016-2017ರಲ್ಲಿ ನಾನು ಟಾಟಾ ಎಲೆಕ್ಸಿ ಲಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನು. ಅ ಸಮಯದಲ್ಲಿ ನನಗೆ ತಿಂಗಳಿಗೆ ರೂ 50 ಸಾವಿರ ಸಂಬಳವಿತ್ತು, ಅ ಸಮಯದಲ್ಲಿ ನನಗೆ ತಿಂಗಳಿಗೆ ರೂ 50 ಸಾವಿರ ಸಂಬಳ ಬರುತ್ತಿತ್ತು ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನ್ನ ಬ್ಯಾಂಕ್ ಖಾತೆ ಹಾಗೂ ಬ್ಯಾಂಕ್ ಖಾತೆಗೆ ಸಂಬಂದಿಸಿದ ಚೆಕ್ಕು ಪುಸ್ತಕ ನನ್ನ ಬಳಿಯಿದೆ. ನನ್ನ ಕಂಪನಿಯಿಂದ ಸಂಬಳ ನೇರವಾಗಿ ನನ್ನ ಬ್ಯಾಂಕ್ ಖಾತೆಗೆ ಬರುತ್ತಿತ್ತು ಎಂದರೆ ಸರಿ. ರೂ 2 ಲಕ್ಷ ಹಣವನ್ನು ಅರೋಪಿಯವರಿಗೆ ನಾನು ನಗದು ರೂಪದಲ್ಲಿ ನೀಡಿರುತ್ತೇನೆ. ಮಾರ್ಚ್ 2017ರಂದು ನಾನು ರೂ 40 ಸಾವಿರ ನನ್ನ ಬ್ಯಾಂಕ್ ಖಾತೆಯಿಂದ ತೆಗೆದಿದ್ದೇನು ಹಾಗೂ ಉಳಿದ ರೂ 1,60,000-00 ನನ್ನ ಮನೆಯಲ್ಲಿ ನನ್ನ ಬಳಿಯಿತು. ಸಾಮಾನ್ಯವಾಗಿ ನಾನು ಮನೆಯಲ್ಲಿ ರೂ 1ವರೆ ಲಕ್ಷ ಹಣವನ್ನು ನಗದಾಗಿ ನಾನು ಇಟ್ಟುಕೊಳ್ಳುತ್ತೇನೆ. ಮಾರ್ಚ್ 2017ರಂದು ನಾನು ಬ್ಯಾಂಕಿನಿಂದ ಹಣ ತೆಗೆದಿರುವ

ಸಂಬಂದ ತೋರಿಸಲು ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್ ಹಾಜರು ಪಡಿಸಿರುವುದಿಲ್ಲ. ನನ್ನ ಬಳಿ ನನ್ನ ಮನೆಯಲ್ಲಿ ಹಣವಿದ್ದ ಕಾರಣ ಆರೋಪಿಯವರು ಕೇಳಿದ ತಕ್ಷಣ ಹಣವನ್ನು ಕೊಡಲು ತೊಂದರೆಯಿ ರಲಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನಗೆ ಬೇರೆ ಕಮಿಟ್ಸ್‌ಮೆಂಟ್ಸ್ ಇದ್ದವು ಎಂದು ಹೇಳುತ್ತಾರೆ. ಆರೋಪಿಯವರಿಗೆ ಹಣವನ್ನು ಬ್ಯಾಂಕ್ ವ್ಯವಹಾರದ ಮೂಲಕ ಕೊಡಲು ತೊಂದರೆಯಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಗದಾಗಿಯೇ ಹಣ ಬೇಕೆಂದು ನನ್ನ ಬಳಿ ಕೇಳಿದ್ದರು ಎನ್ನುತ್ತಾರೆ. ನಾನು ಆರೋಪಿಯವರಿಗೆ ಹಣ ನೀಡಿದಾಗ ವಿಶ್ವಾಸದಿಂದ ಅವರಿಂದ ಬೇರೆ ಯಾವುದೇ ದಾಖಲೆ ಬರೆಸಿಕೊಂಡಿಲ್ಲ.

ರೂ 2 ಲಕ್ಷ ಹಣದಲ್ಲಿ ಎಲ್ಲವೂ 100 ರೂಪಾಯಿ ಮುಖ ಬೆಲೆಯ ನೋಟುಗಳು ಇದ್ದವು. ಅದರಲ್ಲಿ 20 ಬಂಡಲ್ ಹಣವಿತ್ತು. ಒಂದು ಬಂಡಲ್‌ನ ಹಣದಲ್ಲಿ 100 ರೂಪಾಯಿ ಮುಖ ಬೆಲೆಯ 100 ನೋಟುಗಳು ಇದ್ದವು. ಮಾರ್ಚ್ 2017ರಂದು ನನ್ನ ಬಳಿ ರೂ 2 ಲಕ್ಷ ಹಣವಿತ್ತು ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. 2017-2018ರ ಸಾಲಿನ ಆದಾಯ ತೆರಿಗೆ ರಿಟನ್ಸ್ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆ ಸಮಯದ ನನ್ನ ಆದಾಯ ತೆರಿಗೆ ರಿಟನ್ಸ್ ದಾಖಲೆ ಹಾಜರು ಪಡಿಸಲು ತೊಂದರೆಯಿಲ್ಲ. ನನ್ನ ಆದಾಯ ತೆರಿಗೆ ರಿಟನ್ಸ್‌ನಲ್ಲಿ ಆರೋಪಿಯವರಿಗೆ ರೂ 2 ಲಕ್ಷ ಸಾಲ ನೀಡಿರುವುದನ್ನು ನಮೂದಿಸಿರುವುದಿಲ್ಲ. ನನ್ನ ಆದಾಯ ತೆರಿಗೆ ರಿಟನ್ಸ್‌ನಲ್ಲಿ ಆರೋಪಿಯವರಿಗೆ ನೀಡಿದ ಸಾಲವನ್ನು ತೋರಿಸುವ ಅವಶ್ಯಕತೆಯಿರದ ಕಾರಣ ಅದನ್ನು ತೋರಿಸಿರುವುದಿಲ್ಲ. 2018ರ ಮಾರ್ಚ್ ತಿಂಗಳಲ್ಲಿ ನಾನು ಆರೋಪಿಯವರ ಬಳಿ ಹೋಗಿ ನನ್ನ ಹಣವನ್ನು ಹಿಂದುರುಗಿಸಿಯೆಂದು ಕೇಳಿರುತ್ತೇನೆ. ಆಗ ಆರೋಪಿಯವರು ಎರಡು ತಿಂಗಳ ನಂತರ ಹಣವನ್ನು ಹಿಂದುರುಗಿಸುತ್ತೇನೆಂದು ತಿಳಿಸಿದರು. ಪುನಃ ನಾನು ಮೇ 2018ರ ಕೊನೆಯ ವಾರ ಅಥವಾ ಜೂನ್ 2018ರ ಮೊದಲ ವಾರದಂದು ಆರೋಪಿಯವರ ಬಳಿ ಹೋಗಿ ಹಣ ಹಿಂದುರುಗಿಸಿಯೆಂದು ಕೇಳಿದೆನು. ಆರೋಪಿಯವರೇ ನನಗೆ ವಿವಾದಿತ ಚೆಕ್ಕನ್ನು ನೀಡಿರುತ್ತಾರೆ. ಆದರೆ ಯಾವ ದಿನಾಂಕದಂದು ಕೊಟ್ಟಿರುತ್ತಾರೆ ನೆನಪು ಇಲ್ಲ.

ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ವಿವಾದಿತ ಚೆಕ್ಕನ್ನೇ ಅರೋಪಿಯವರು ನನಗೆ ನೀಡಿರುತ್ತಾರೆ. ವಿವಾದಿತ ಚೆಕ್ಕಿನಲ್ಲಿರುವ ಬರವಣಿಗೆಯನ್ನು ಯಾರು ಬರೆದಿರುತ್ತಾರೆ ನನಗೆ ಗೊತ್ತಿಲ್ಲ, ವಿವಾದಿತ ಚೆಕ್ಕಿನಲ್ಲಿ ಬರವಣಿಗೆಯನ್ನು ಮಾಡಿಕೊಂಡು ತಂದು ನನ್ನ ಮುಂದೆ ಸಹಿ ಮಾಡಿ ಅದನ್ನು ನನಗೆ ನೀಡಿರುತ್ತೆ. ಅರೋಪಿಯವರು ನನಗೆ ಯಾವುದೇ ಸಾಲವನ್ನು ಹಿಂದುರುಗಿಸಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅವರಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹಣದ ಬಾಬ್ತು ಅರೋಪಿಯವರು ನನಗೆ ವಿವಾದಿತ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದಿಃ 12.06.2018ರಂದು ನಾನು ವಿವಾದಿತ ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ದಿಃ 22.06.2018ರಂದು ನಮ್ಮ ವಕೀಲರ ಮೂಲಕ ನೋಟೀಸನ್ನು ಕಳುಹಿಸಿರುತ್ತೇನೆ. ನಾನು ಕಳುಹಿಸಿದ ವಕೀಲರ ನೋಟೀಸು ಅರೋಪಿಯವರಿಗೆ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ಅರೋಪಿಯವರದ್ದು ಅಗಿರುವುದಿಲ್ಲ ಎಂದರೆ ಸರಿಯಲ್ಲ. ಅರೋಪಿಯವರಿಗೆ ನಾನು ವಕೀಲರ ಮೂಲಕ ಕಳುಹಿಸಿದ ನೋಟೀಸು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

2014ರಲ್ಲಿ ನಾನು ಚಿಂತಾಮಣಿಯಲ್ಲಿ ಒಂದು ನಿವೇಶನವನ್ನು ಖರೀದಿಸಿದ್ದೇನು ಎಂದರೆ ಸರಿಯಲ್ಲ. ಚಿಂತಾಮಣಿಯ ದೇವರಾಜ್ ಎನ್ನುವವರು ನನಗೆ ತುಂಬಾ ಅತ್ಮಿಯರು ಎಂದರೆ ಸರಿಯಲ್ಲ. ಅರೋಪಿಯವರ ಗಂಡ ಬಾಬುರೆಡ್ಡಿರವರು ದೇವರಾಜ್‌ರವರಿಗೆ ಸ್ವಲ್ಪ ಸಾಲವನ್ನು ಕೊಡಬೇಕಾಗಿದ್ದಾಗ ಅರೋಪಿಯವರಿಗೆ ಸಂಬಂದಿಸಿದ ವಿವಾದಿತ ಚೆಕ್ಕನ್ನು ದೇವರಾಜ್‌ರವರಿಗೆ ಬದ್ರತೆಗಾಗಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ದೇವರಾಜ್‌ರವರಿಂದ ನಾನು ವಿವಾದಿತ ಚೆಕ್ಕನ್ನು ಪಡೆದು ಅರೋಪಿಯವರ ವಿರುದ್ದ ಈ ಪ್ರಕರಣವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನನಗೂ ಅರೋಪಿಯವರಿಗೂ ಯಾವುದೇ ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯವರು ನನ್ನಿಂದ ಯಾವುದೇ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯವರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

17ನೇ ಅಪರ ನ್ಯಾಯಾಧೀಶರು
ಮತ್ತು ಎಸಿಎಂಎಂ